

# ಸಾಹಸ ಮೆರೆದ ಬಾಲಕ

ಭಾಗ–1

ಒಬ್ಬಳು ಮಹಿಳೆಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಮಗಳಿದ್ದಳು. ಮಗಳು ಚಿಕ್ಕವಳು. ವಸಂತ ಋತು ಸಮಯದಲ್ಲಿ ಇಬ್ಬರು ಮಕ್ಕಳು ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಹೊಲದ ಒಂದು ಭಾಗ ಗಟ್ಟಿಯಾಗಿದ್ದು, ಇದನ್ನು ಮರುದಿನ ಸರಿಪಡಿಸಲು ಯೋಚಿಸಿ ಇಬ್ಬರೂ ಮನೆಗೆ ಬಂದರು. ಮರುದಿನ ಇಬ್ಬರೂ ಅಮ್ಮನಿಗೆ ಹೇಳಿದರು.

'ಅಮ್ಮಾ, ನಾವು ಇಂದು ಗಟ್ಟಿಯಾಗಿದ್ದ ಜಾಗವನ್ನು ಅಗೆದು ಸರಿಪಡಿಸಬೇಕು. ಇವತ್ತು ನೀನು ನಮ್ಮ ಊಟವನ್ನು ತಂಗಿಯ ಬಳಿ ಕಳುಹಿಸಿಕೊಡು.'

'ಅವಳಿನ್ನೂ ಚಿಕ್ಕವಳು. ಅಷ್ಟು ದೂರದ ಮಾರ್ಗದಲ್ಲಿ ಒಬ್ಬಳೇ ಹೇಗೆ ಬರುತ್ತಾಳೆ?' ಅಮ್ಮನಿಗೆ ಚಿಂತೆ ಕಾಡಿತು.

'ನಾವು ನಮ್ಮ ಮನೆಯಿಂದ ಹೊಲದವರೆಗೆ ನೊಗದಿಂದ ಗುರುತು ಹಾಕುತ್ತೇವೆ. ಅವಳು ಆ ಗುರುತನ್ನೇ ಹಿಡಿದು ಬರಲಿ' ಎಂದರು ಮಕ್ಕಳು.

ಮರುದಿನ ಮಕ್ಕಳು ನೊಗ– ಎತ್ತಿನೊಂದಿಗೆ ಹೊಲಕ್ಕೆ ಹೊರಟರು. ಅಲ್ಲಿ ಸಾಕಷ್ಟು ಕೆಲಸ ಮಾಡಿದ ನಂತರ ತಂಗಿಗಾಗಿ ಕಾಯುತ್ತಾ ಕೂತರು. ಆದರೆ ಎಷ್ಟು ಹೊತ್ತಾದರೂ ತಂಗಿ ಬರಲೇ ಇಲ್ಲ.

ಹೊಲದಿಂದ ಸ್ವಲ್ಪ ದೂರದಲ್ಲಿ ಒಬ್ಬ ವೃದ್ಧ ಡ್ರಾಗನ್ ವಾಸಿಸುತ್ತಿದ್ದ. ಅವನಿಗೆ ಒಂಟಿ ಬಾಲಕಿಯೊಬ್ಬಳು ಅಲ್ಲಿಂದ ಹಾದು ಹೋಗುತ್ತಿರುವ ವಿಷಯ ತಿಳಿಯಿತು. ಡ್ರಾಗನ್ ಮಕ್ಕಳು ಎಳೆದಿದ್ದ ಗುರುತು ರೇಖೆಯನ್ನೇ ಹಿಡಿದು ಸಾಗಿದ; ನಂತರ ತನ್ನ ಬಾಲದಿಂದ ಆ ಗುರುತು ರೇಖೆಯನ್ನು ಅಳಿಸಿ ಆ ಜಾಗದಲ್ಲಿ ತನ್ನ ಅರಮನೆಗೆ ಹೋಗುವ ಗುರುತು ರೇಖೆಯನ್ನು ಎಳೆದ. ತಂಗಿ ಅದೇ ದಾರಿಯಲ್ಲಿ ಹೋಗಿ ಡ್ರಾಗನ್ ಬಲೆಗೆ ಸಿಕ್ಕಿ ಬಿದ್ದಳು.

ಸಂಜೆ ಮಕ್ಕಳು ಮನೆಗೆ ಬಂದಾಗ ತಂಗಿ ಕಳೆದು ಹೋದ ವಿಷಯ ತಿಳಿದು ಕಳವಳಗೊಂಡರು. ಮರುದಿನ ಹಿರಿಯ ಅಣ್ಣ ಅವಳನ್ನು ಹುಡುಕುತ್ತಾ ಡ್ರಾಗನ್ ಎಳೆದ ಗುರುತು ರೇಖೆಯನ್ನೇ ಅನುಸರಿಸಿ ಹೋದ. ಡ್ರಾಗನ್‌ನ ಅರಮನೆ ಸಮೀಪಕ್ಕೆ ಬಂದಾಗ ಅವನಿಗೆ ತಂಗಿಯ ಧ್ವನಿ ಕೇಳಿಸಿತು. 'ನೀನು ಇಲ್ಲೇಕೆ ಬಂದೆ? ಡ್ರಾಗನ್ ನಿನ್ನನ್ನು ನೊಣದಂತೆ ಕೊಲ್ಲುತ್ತಾನೆ.'

ಅಣ್ಣ ತಂಗಿಯ ಬಳಿಗೆ ಹೋಗಿ, ಅವಳನ್ನು ಡ್ರಾಗನ್‌ನ ಅರಮನೆಯಿಂದ ಕರೆದುಕೊಂಡು ಹತ್ತು ಹೆಜ್ಜೆ ಮುಂದೆ ಹೋಗಿದ್ದ, ಆಗಲೇ ಡ್ರಾಗನ್ ಪ್ರತ್ಯಕ್ಷನಾಗಿ ಹೇಳಿದ, 'ನೀನು ನನ್ನೊಂದಿಗೆ ಹೋರಾಡುತ್ತೀಯೋ ಅಥವಾ ನನ್ನ ಜೊತೆ ಕೂತು ಊಟ ಮಾಡುತ್ತೀಯೋ ಹೇಳು'

'ನಾನು ಶತ್ರುವಿನೊಂದಿಗೆ ಕೂತು ಊಟ ಮಾಡುವುದಿಲ್ಲ. ನಿನ್ನೊಂದಿಗೆ ಹೋರಾಡುತ್ತೇನೆ'. ಎಂದ ಅಣ್ಣ.

ಡ್ರಾಗನ್ ತಕ್ಷಣ ತನ್ನ ಸೊಂಟದಲ್ಲಿದ್ದ ಕತ್ತಿಗೆ ಆದೇಶಿಸಿದ– 'ಸಾವಿನ ಕತ್ತಿಯೇ, ನೀನು ಕವಚದಿಂದ ಹೊರಬಂದು ಈ ಹುಡುಗನ ಕಾಲುಗಳನ್ನು ಕತ್ತರಿಸು!'

ಕತ್ತಿ ಹೊರ ಬಂದು ಕೂಡಲೇ ಅವನ ಕಾಲುಗಳನ್ನು ಕತ್ತರಿಸಿತು. ಡ್ರಾಗನ್ ಅವನನ್ನು ಮತ್ತು ಅವನ ಕತ್ತರಿಸಿದ ಕಾಲುಗಳನ್ನು ಒಂದು ಆಳದ ಹೊಂಡಕ್ಕೆ ಎಸೆದ.

ಅನೇಕ ದಿನಗಳು ಕಳೆದರೂ ಅಣ್ಣ ಬರದಿದ್ದಾಗ ತಮ್ಮನು ಅಣ್ಣ ಮತ್ತು ತಂಗಿಯನ್ನು ಹುಡುಕಲು ಹೊರಟ, ಅವನೂ ಸಹ ಡ್ರಾಗನ್ ಎಳೆದ ಗುರುತು ರೇಖೆಯನ್ನೇ ಅನುಸರಿಸಿ ಹೋದ.

ಡ್ರಾಗನ್‌ನ ಅರಮನೆಯ ಸಮೀಪಕ್ಕೆ ಬಂದಾಗ ಅವನಿಗೆ ತಂಗಿಯ ಧ್ವನಿ ಕೇಳಿಸಿತು. 'ನೀನು ಇಲ್ಲೇಕೆ ಬಂದೆ? ಡ್ರಾಗನ್ ನಿನ್ನನ್ನು ನೊಣದಂತೆ ಕೊಲ್ಲುತ್ತಾನೆ.'

ಎರಡನೆಯ ತಮ್ಮ ತಂಗಿಯ ಬಳಿಗೆ ಹೋಗಿ, ಅವಳನ್ನು ಡ್ರಾಗನ್‌ನ ಅರಮನೆಯಿಂದ ಕರೆದುಕೊಂಡು ಹತ್ತು ಹೆಜ್ಜೆ ಮುಂದೆ ಹೋಗಿದ್ದ, ಆಗಲೇ ಡ್ರಾಗನ್ ಪ್ರತ್ಯಕ್ಷನಾಗಿ ಹೇಳಿದ.

'ನೀನು ನನ್ನೊಂದಿಗೆ ಹೋರಾಡುತ್ತೀಯೋ ಅಥವಾ ನನ್ನ ಜೊತೆ ಕೂತು ಊಟ ಮಾಡುತ್ತೀಯೋ, ಹೇಳು'.